## ಮಗನ ಮಾತು ಅಪ್ಪ ಕೇಳಬಾರದೇ?

ಕಲರ್ಸ್ ಕನ್ನಡದ 'ರಾಮಾಚಾರಿ'ಯಲ್ಲಿ ಮಗನ ಮದುವೆಯನ್ನು ತನ್ನ ತಂಗಿಯ ಮಗಳ ಜೊತೆ ಮಾಡಿಸುವುದಾಗಿ ಮನೆಯ ಯಜಮಾನ ಮಾತು ಕೊಡುತ್ತಾರೆ. ಮಗ 'ಈ ಮದುವೆ ಇಷ್ಟವಿಲ್ಲ' ಅಂದಿದ್ದಕ್ಕೆ ಅವರ ತಂದೆ ಊಟ ಬಿಟ್ಟು ಹಟ ಮಾಡುತ್ತಾರೆ. ಸುಸ್ತಾದ ಅವರನ್ನು ಆಸ್ಪತ್ರೆಗೆ ಸೇರಿಸುತ್ತಾರೆ. ಆಗ ತಾಯಿ 'ನನ್ನ ತಾಳಿಯನ್ನು ಉಳಿಸಿಕೊಡು' ಎಂದು ಮಗನ ಮುಂದೆ ಗೋಗರೆಯುತ್ತಾರೆ. ಮಗನ ಸುಖ ದುಃಖಕ್ಕಿಂತ ತಾವು ಕೊಟ್ಟ ಮಾತನ್ನು ಉಳಿಸಿಕೊಳ್ಳುವುದೇ ರಾಮಾಚಾರಿ ತಂದೆ–ತಾಯಿಗೆ ಹೆಚ್ಚಾಯಿತಾ? ತಂದೆಯ ಮಾತನ್ನು ಮಕ್ಕಳು ಕೇಳಲೇಬೇಕು ಎನ್ನುವುದಾದರೆ, ಮಕ್ಕಳ ಮಾತನ್ನು ತಂದೆ ಕೇಳಬಾರದೇಕೆ? ಮದುವೆಯನ್ನು ಬಲವಂತದಿಂದ, ಹಿಂಸೆಯಿಂದ ಮಾಡಿದರೆ ಅವರು ಸುಖವಾಗಿ ಸಂಸಾರ ನಡೆಸುತ್ತಾರಾ? ಇದು ಅಷ್ಟು ಬುದ್ಧಿವಂತ ತಂದೆಗೆ ಅರ್ಥವಾಗುವುದಿಲ್ಲವೇ?

—ಬಿ.ಆರ್. ಉಷಾ, ಕೆನಡಾ

## ಮುಗಿಸಿ ಬಿಡಿ!

ಇತ್ತೀಚೆಗೆ ಟೀವಿಯಲ್ಲಿ ಬರುತ್ತಿರುವ ಧಾರಾವಾಹಿಗಳು ಎಷ್ಟು ಕೆಳಮಟ್ಟದಲ್ಲಿ ಇವೆ ಎಂಬುದಕ್ಕೆ ಉದಯದ 'ಸೇವಂತಿ', ಕಲರ್ಸ್ ಕನ್ನಡದ 'ಮಂಗಳಗೌರಿ ಮದುವೆ' ಸಾಕ್ಷಿ. ಇವು ಪರಸ್ಪರ ಒಂದಕ್ಕೊಂದು ಪೈಪೋಟಿಗೆ ಇಳಿದಂತೆ ಮುಂದಕ್ಕೆ ಬೆಳೆಯುತ್ತಲೇ ಇವೆ. ದಯವಿಟ್ಟು ಈ ಎರಡನ್ನೂ ಬೇಗ ಮುಗಿಸಬೇಕೆಂದು ಮನವಿ.

—ಎಚ್.ಎಸ್. ಶಿವಶಂಕರ್, ಬೆಂಗಳೂರು

## ಸಮಸ್ಯೆಗೆ ಪರಿಹಾರ ಪ್ರಹಸನವಾಗಲಿ

ಝೀ ಟೀವಿಯ 'ಡ್ರಾಮಾ ಜೂನಿಯರ್ಸ್' ಮನೋಜ್ಞವಾಗಿದೆ. ಪ್ರತಿ ಸಂಚಿಕೆಯಲ್ಲೂ ಉಪಯುಕ್ತ ಮಾಹಿತಿಯನ್ನು ಒಳಗೊಂಡ ನಾಟಕಗಳನ್ನು ನೀಡುತ್ತಿದ್ದಾರೆ. ಸ್ವಾತಂತ್ರ್ಯ ಭಾರತದ ಅಮೃತಮಹೋತ್ಸವದ ಕಾಲಕ್ಕೂ ಜನರನ್ನು ಅನೇಕ ಸಮಸ್ಯೆಗಳು ಕಾಡುತ್ತಿದ್ದು, ಆ ನೋವಿನ ಸಂಗತಿಗಳನ್ನು ಮಕ್ಕಳ ನಾಟಕದಲ್ಲಿ ಬಿಂಬಿಸಬೇಕು. ಸಾಮಾನ್ಯರ ಸಂಕಷ್ಟಗಳ ಪರಿಹಾರಕ್ಕೆ ಸೂತ್ರಗಳೇನು ಎನ್ನುವ ಅಂಶವನ್ನು ಪ್ರಹಸನ ಗುರುತಿಸುವಂತೆ ಆಗಲಿ.

—ಬಿ.ಎಸ್. ಚಂದ್ರಶೇಖರ್, ಬೆಂಗಳೂರು

ವಾರದ ಪತ್ರ

## ಲಿಟೆರರಿ... ಜನೋಪಯೋಗಿ ಆಗಲಿ

ಚಂದನ ವಾಹಿನಿಯು 'ಥಟ್ ಅಂತ ಹೇಳಿ' ಮತ್ತು 'ವಾರದ ಅತಿಥಿ'ಯಂತೆ 'ಲಿಟೆರರಿ ಗುರು' ಕಾರ್ಯಕ್ರಮವನ್ನು ರೂಪಿಸಲಿ. ಆರಂಭದಲ್ಲಿ ಅದು ಹುಟ್ಟಿಸಿದ ಕುತೂಹಲ ನಂತರದ ದಿನಗಳಲ್ಲಿ ಉಳಿಯಲ್ಲಿಲ್ಲ. ಉದ್ದೇಶ ಏನೇ ಇದ್ದರೂ ಅದಕ್ಕೊಂದು ಸ್ಪಷ್ಟ ನೀತಿ ನಿಯಮಗಳನ್ನು ಹಾಕಿಕೊಳ್ಳಬೇಕು. 'ಥಟ್...' ದಶಕಗಳು ಉರುಳಿದರೂ ಆಕರ್ಷಣೆ ಕಳೆದುಕೊಂಡಿಲ್ಲ. ಮಾಹಿತಿಪೂರ್ಣ ಆ ಕಾರ್ಯಕ್ರಮವನ್ನು ತಪ್ಪಿಸಿಕೊಳ್ಳಲು ಮನಸು ಬರುವುದಿಲ್ಲ. ಅಂತೆಯೇ 'ಲಿಟೆರರಿ ಗುರು' ಕೂಡ ಆಗಬೇಕಿತ್ತು. ಸಾಹಿತ್ಯ ಸಾಧಕರ ಬರಹ ಬದುಕು ಹೊಸ ತಲೆಮಾರಿನ ಲೇಖಕರಿಗೆ ಪ್ರೇರಣೆ ಆಗಬಹುದು ಎನ್ನುವುದು ನಮ್ಮ ನಿರೀಕ್ಷೆ. ಆದರೆ, ಕೆಲವು ಸಂಚಿಕೆಗಳು ನೋಡುವಷ್ಟರಲ್ಲಿ ಅದರ ಬಗ್ಗೆ ಬೇಸರ ಅನಿಸಿತು. ಅತಿಥಿಗಳ ಆಹ್ವಾನದಲ್ಲೂ ಒಂದು ಸ್ಪಷ್ಟತೆ ವಾಹಿನಿಗೆ ಇರಬೇಕು.

—ಶಿವರುದ್ರಪ್ಪ, ಮಂಡ್ಯ

## ಕ್ರಿಯೆಗೆ ಪ್ರತಿಕ್ರಿಯೆ ಇಲ್ಲಿರಬೇಕು

ಚಂದನದ ರಸಪ್ರಶ್ನೆ ಕಾರ್ಯಕ್ರಮ 'ಥಟ್ ಅಂತ ಹೇಳಿ' ಬಗ್ಗೆ ಜಾಣರ ಪೆಟ್ಟಿಗೆಯಲ್ಲಿ ನಿರಂತರವಾಗಿ ವೀಕ್ಷಕರು ಪರಾಮರ್ಶಿಸುತ್ತಾ ಬಂದಿದ್ದಾರೆ. ವೀಕ್ಷಕರ ಅದ್ಭುತ ಪ್ರತಿಕ್ರಿಯೆಗಳಿಗೆ ಈ ಕಾರ್ಯಕ್ರಮದ ರೂವಾರಿಗಳು ಅಥವಾ ನಿರೂಪಕರ ಕಡೆಯಿಂದಲೂ ಪ್ರತಿಕ್ರಿಯೆ ಅಥವಾ ಅಭಿಪ್ರಾಯ ಸಿಕ್ಕರೆ ಈ ಕಾರ್ಯಕ್ರಮದ ವಿಮರ್ಶೆಗೆ ಸಾರ್ಥಕತೆ ಸಿಕ್ಕಂತಾಗುತ್ತದೆ. ಕ್ರಿಯೆ–ಪ್ರತಿಕ್ರಿಯೆ ಇದ್ದಾಗಲೇ ಗೊಂದಲವನ್ನು ಪರಿಹರಿಸಿಕೊಳ್ಳಲು ಅನುಕೂಲವಾಗುತ್ತದೆ.

—ಎಂ.ಜೆ. ಅಭಿಷೇಕ್, ಬೆಂಗಳೂರು

## ಸೈಯದ್‌ಗೆ ಸಲಾಂ

ಚಂದನದ 'ವಾರದ ವ್ಯಕ್ತಿ' ಸೈಯದ್ ಸಲ್ಲಾವುದ್ದೀನ್ ಪಾಷ ಅವರ ಸಾಧನೆಗೆ ದೊಡ್ಡ ಸಲಾಂ. ಆ ವ್ಯಕ್ತಿಯ ವಿಶೇಷವೆಂದರೆ ಅವರೊಬ್ಬ ವಿದ್ವತ್ತಿನ ಆಗರದಂತೆ ಇದ್ದಾರೆ. ಅವರು ಮಾಡುತ್ತಿರುವ ಕೆಲಸ ಅತ್ಯಂತ ಮಹತ್ವದ್ದಾಗಿದೆ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಕನ್ನಡತಿಯಿಂದ ಒಬ್ಬೊಬ್ಬರೇ ಮಾಯ

ಕಲರ್ಸ್ ಕನ್ನಡದ 'ಕನ್ನಡತಿ'ಯ ಕೆಲವು ಪಾತ್ರಧಾರಿಗಳು ಹೊರ ಹೋಗುತ್ತಿದ್ದಾರೆ. ತಾವು ನಟಿಸುತ್ತಿದ್ದ ಧಾರಾವಾಹಿಗಳಿಂದ ಹಿಂದೆ ಸರಿಯುವುದು ಕನ್ನಡ ಧಾರಾವಾಹಿಗಳಲ್ಲಿ ಟ್ರೆಂಡ್ ಆಗುತ್ತಿದೆ. 'ಮಂಗಳ ಗೌರಿ ಮದುವೆ'ಯ ನಂತರ ಈಗ 'ಕನ್ನಡತಿ'ಗೆ ಈ ವ್ಯಾಧಿ ಅಂಟಿದಂತೆ ಕಾಣುತ್ತಿದೆ. ಕನ್ನಡತಿಯಲ್ಲಿ ಖಳನಾಯಕಿಯ ಪಾತ್ರಕ್ಕೆ ಹೊಸರೂಪ ನೀಡಿ ವೀಕ್ಷಕರ ಮನಗೆದ್ದ ಸಾನಿಯಾ ಬೈ ಹೇಳಿದ ನಂತರ, ದೇವು ಮತ್ತು ಆದಿ ಕನ್ನಡತಿಯಿಂದ ಕಳಚಿಕೊಂಡಂತೆ ಕಾಣುತ್ತದೆ. ಧಾರಾವಾಹಿಯನ್ನು ಎಳೆದರೆ ಪಾತ್ರಧಾರಿಗಳು ಜಾರಿಕೊಳ್ಳುವುದು ಸಾಮಾನ್ಯ.

—ರಮಾನಂದ ಶರ್ಮಾ, ಬೆಂಗಳೂರು

## ಮಾಹಿತಿಯ ಕಣಜ

ರಾಜ್ಯದ ಎಲ್ಲೆಡೆ ವಿಪರೀತ ಮಳೆ ಸುರಿಯುತ್ತಿದೆ. ಅಂತಹ ಸಂದರ್ಭದಲ್ಲಿ ಕೆಲಸ ಕಾರ್ಯ ಸಂಬಂಧ ಮನೆಯಿಂದ ಹೊರ ಹೋದವರು ಇನ್ನೂ ಬರಲಿಲ್ಲ ಎಂದು ಮನಸಿನಲ್ಲಿ ಉದ್ವೇಗ ಹೆಚ್ಚಾಗುತ್ತದೆ. ಆ ಸಮಯದಲ್ಲಿ ಸುದ್ದಿ ವಾಹಿನಿಯನ್ನು ನೋಡುತ್ತಾ ಸಮಾಧಾನ ಮಾಡಿಕೊಂಡಿದ್ದೂ ಉಂಟು. ಮಳೆ ಸೇರಿದಂತೆ ನೈಸರ್ಗಿಕ ವಿಕೋಪದ ಸಂದರ್ಭದಲ್ಲಿ ಸುದ್ದಿ ವಾಹಿನಿಗಳು ನೀಡುವ ಮಾಹಿತಿ ವೀಕ್ಷಕರಾದ ನಮಗೆ ಸಮಾಧಾನವನ್ನು ನೀಡುವ ಜೊತೆಗೆ ನಿಖರ ಮಾಹಿತಿಯನ್ನು ಕೊಡುತ್ತಿವೆ. ಈ ಕಾರಣಕ್ಕೆ ಎಷ್ಟೇ ಲೋಪ ದೋಷಗಳಿದ್ದರೂ ಸುದ್ದಿವಾಹಿನಿಗಳು ನಮ್ಮ ಬದುಕಿನ ಅನಿವಾರ್ಯ ಮಾಹಿತಿ ಕಣಜ ಎನ್ನುವುದನ್ನು ಒಪ್ಪಲೇಬೇಕು.

—ರಾಘವೇಂದ್ರ, ತಿಪಟೂರು

## ಆ್ಯಸಿಡ್ ಎರಚುವ ಹೆಂಗಸರ ಬಗ್ಗೆ ಎಚ್ಚರ

ಕೆಲವು ದಿನಗಳ ಹಿಂದೆ ಚೂರಿಯಿಂದ ಚುಚ್ಚಿ ಚುಚ್ಚಿ ಕೊಲೆ ಮಾಡುವ ದೃಶ್ಯವನ್ನು ಸುದ್ದಿ ವಾಹಿನಿಗಳು ಬಿತ್ತರಿಸಿದವು. ಅದೇನು ಮುಗೀತು ಅನ್ನೋ ಅಷ್ಟರಲ್ಲೇ ಕನ್ನಡ ಧಾರಾವಾಹಿಗಳ ಖಳ ನಾಯಕಿಯರು ಆ್ಯಸಿಡ್ ಎರಚುವ ತಂತ್ರಗಾರಿಕೆ ಆರಂಭಿಸಿದ್ದಾರೆ. ಈ ಹಿಂದೆ ಬೆಂಗಳೂರಿನಲ್ಲಿ ಯುವತಿಯ ಮೇಲೆ ಆ್ಯಸಿಡ್ ದಾಳಿ ನಡೆದಿತ್ತು. ಅದು ಧಾರಾವಾಹಿಗಳ ನಿರ್ದೇಶಕರಿಗೆ ಮಾಸ್ಟರ್ ಪ್ಲಾನ್ ಸಿಕ್ಕಂತೆ ಆಯಿತೇನೋ? ತಾಯಿ ಮಗಳಿಗೆ, ಹೆಂಡತಿ ಗಂಡನಿಗೆ, ತಂಗಿ ಅಕ್ಕನಿಗೆ ಆ್ಯಸಿಡ್ ಎರಚುವ ಕುತಂತ್ರಗಳ ದೃಶ್ಯ ಬೇಸರವನ್ನು ಹುಟ್ಟಿಸುತ್ತವೆ. ಏನು ಸಂದೇಶ ನೀಡಲು ಹೊರಟಿದ್ದಾರೆ ಎಂಬುದೇ ಗೊತ್ತಾಗುತ್ತಿಲ್ಲ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಸೆನ್ಸಾರ್ ಇರಲಿ

ಸ್ಟಾರ್ ಸುವರ್ಣದ 'ಇಸ್ಮಾರ್ಟ್ ಜೋಡಿ' ನೋಡಲು ಮುಜುಗರ ಉಂಟಾಗಿ ನೋಡುವುದನ್ನೇ ನಿಲ್ಲಿಸಿದೆವು. ಟೀವಿಗಳು ಮನರಂಜನೆ ಜೊತೆಗೆ ಸದಭಿರುಚಿಯ ಕಾರ್ಯಕ್ರಮ ರೂಪಿಸಬೇಕು. ಸೆನ್ಸಾರ್ ಮಂಡಳಿ ಇದ್ದರೆ ಒಳಿತು ಎಂಬುದು ನನ್ನ ಅನಿಸಿಕೆ.

— ಕೆ.ಎಸ್. ಸವಿತ, ಬೆಂಗಳೂರು